ಪಿ. ಜಯವಂತ ಪೈ, ಕುಂದಾಪುರ
ಮನೆಗೂ ಸೆರೆಮನೆಗೂ ವ್ಯತ್ಯಾಸವೇನು?



ಸೆರೆಮನೆಯಲ್ಲಿ ಕುಕ್, ವಾರ್ಡನ್, ಸೂಪರಿಟೆಂಡೆಂಟ್ ಒಬ್ಬರೇ ಆಗಿರುವುದಿಲ್ಲ.

ದಿನೇಶ್, ಗುಡ್ಡದೂರು
ಮದ್ಯಪಾನ ಹಾನಿಕರವೆಂಬ ಸರ್ಕಾರವೇ ಮದ್ಯಪಾನಕ್ಕೆ ಅವಕಾಶ ಮಾಡಿರಲು ಕಾರಣ?
ಮದ್ಯಪಾನ ನಿಷೇಧ ಸರ್ಕಾರದ ಆರೋಗ್ಯಕ್ಕೆ ಹಾನಿಕರವಾದ್ದರಿಂದ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ನೂಲಿನಂತೆ ಸೀರೆ. ಪಕ್ಷದಂತೆ?
ಚೋರ, ಚೋರಿ.

ಎಸ್ಸೆನ್ ಮಹಾಬಲರಾವ್, ಎನ್ನಾರ್‍ಪುರ
ಮನಸ್ಸಾದಾಗ ಬುದ್ದಿ ಎಲ್ಲಿ ಹೋಗುತ್ತ ಬುದ್ದೀ?
ಧೃತರಾಷ್ಟ್ರನ ಮಗನ ಮನಸ್ಸಿನ ಪಕ್ಕಕ್ಕೆ.

ಮಧುಮತಿ, ಅಭಿಷೇಕ್
ಎಣ್ಣೆಗೂ ಹೆಣ್ಣಿಗೂ ಸಂಬಂಧವಿದೆಯಾ?



ಎರಡೂ ನಶೆಗಳೇ – ಒಂದು ಬಾಟಲಿನದು; ಮತ್ತೊಂದು ಬಾಳಿನದು.

ರತ್ನಜ, ಮೈಸೂರು
ಹುಡುಗಿ ಕೆಟ್ಟರೆ ನಾಯಿ ಮುಟ್ಟಿದ ಮಡಕೆ ಎನ್ನುತ್ತಾರೆ. ಹುಡುಗ ಕೆಟ್ಟರೆ ಏನೆನ್ನಬೇಕು?
ಮಡಕೆಗಳನ್ನು ಮುಟ್ಟಿದ ನಾಯಿ.

ಬಿ. ಚಂದ್ರೇಗೌಡ, ಬೆಂಗಳೂರು
ಯಾವ ರೀತಿಯಲ್ಲಿ ಲೆಕ್ಕ ಹಾಕಿದರೂ ಬಾಲ್ಯವೇ ಚೆನ್ನ ಎನ್ನಿಸಲು ಕಾರಣವೇನು?
ಅದು ನಮ್ಮ ಕಾಲದಲ್ಲಿ. ಈಗಿನ ಬಾಲ್ಯ ಹೋಂವರ್ಕಿನ ಗೊಬ್ಬರದಡಿಯಲ್ಲಿ ನಲುಗುತ್ತಿದೆ.

ಮಲ್ಲಿಕಾರ್ಜುನ, ಸುರಧೇನುಪುರ
ಕಾಸಿದ್ರೆ ಕೈಲಾಸ, ಕೂಸಿದ್ರೆ ಮನೋಲ್ಲಾಸ, ಕೇಸಿದ್ರೆ?
ರಮ್ಮದೋ ವಿಸ್ಕಿದೋ ಕೇಸಾದ್ರೆ ಉಲ್ಲಾಸ; ಕೋರ್ಟಿನಾದ್ದಾದ್ರೆ ಫುಲ್ ಲಾಸ!

ಅನಸೂಯ ಟಿ, ಕೇದಿಗೆಮನೆ
ಮನಸ್ಸಿಗೆ ತುಂಬಾ ದುಃಖವಾದಾಗ ಯಾರಲ್ಲಿ ತೋಡಿಕೊಳ್ಳಬೇಕು?
ಶತ್ರುಗಳಲ್ಲಿ; ಅದನ್ನು ಕೇಳಿ ಸಂತೋಷ ಪಡುವವರು ಅವರೇ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಮೀಸಲಾತಿ ಪದದ ನಿಜವಾದ ಅರ್ಥವೇನು?
ದುರ್ಬಲರಿಗೆಂದು ಆರಂಭವಾಗಿ ಪ್ರಬಲರ ಸ್ವತ್ತಾಗಿರುವ ಸವಲತ್ತು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮಾತು ಮಿತವಿಲ್ಲದಿದ್ದರೆ ಏನಾಗುತ್ತದೆ?
ವಾಹಿನಿಯ ಡಿಸ್ಕಷನ್ ಪ್ಯಾನಲ್.

ಕೆ.ಪಿ. ರಾಮುಗುಂಡಿ, ಬೈಲಹೊಂಗಲ
ರಾಮು ಮತ್ತು ಕೃಷ್ಣರು ಒಬ್ಬರೇ ಆದರೂ ಲೆಕ್ಕಗಳು ಬೇರೆ ಬೇರೆ ಏಕೆ ಸರ್?
ಲಗ್ನದ ಮಾನದಂಡ; ರಾಮನದು ಒಂದೇ; ಕೃಷ್ಣನದು 16000

ಸುಮನ, ತೆಲಂಗಾಣ
ಕೈಕಾಲು ಮುಖ ಇತ್ಯಾದಿ ಅಂಗಗಳಿಗಿರುವಂತೆ ಮನಸ್ಸಿಗೂ ಒಂದು ರೂಪವಿದ್ದಿದ್ದರೆ ಹೇಗಿರುತ್ತಿತ್ತು?
ಮನಸ್ಸನ್ನು ಬದಲಾಯಿಸಲೂ ಸರ್ಜರಿ ಬೇಕಾಗುತ್ತಿತ್ತು.

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕ
ಗ್ರಹಣ ಹಿಡಿದಾಗ ಏನೂ ತಿನ್ನಬಾರದಂತೆ. ಏಕೆ?
ಆ ಸಮಯದಲ್ಲಾದರೂ ಮನೆಯ ಹೆಂಗಸರಿಗೆ ವಿಶ್ರಾಂತಿ ಸಿಗಲೆಂದು.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ನಿಸರ್ಗದಿಂದ ಮಾನವ ಕಲಿಯಬೇಕಾಗಿರುವುದು ಏನು?
ನದಿ–ತರುಗಳಿಂದ ಕೊಡುವುದನ್ನು, ಪ್ರಾಣಿಗಳಿಂದ ಅವಶ್ಯವಿದ್ದಷ್ಟನ್ನೇ ತಿನ್ನುವುದನ್ನು...

## ವಾರದ ಪ್ರಶ್ನೆ

ನಿರುಕ್ತಾ, ಬೆಂಗಳೂರು
ಕೊರೊನಾ ನಂತರದ ದಿನಗಳಲ್ಲಿ ಮಾಸ್ಕ್ ಧರಿಸದಿದ್ದರೆ ಏನೋ ಕಳಕೊಂಡ ಅನುಭವ. ಹೀಗೇಕೆ?
ಛೆ! ನಿಮ್ಮ ವಸ್ತ್ರಬದ್ಧತೆ ನಮ್ಮ ಡೂಡ್ ಡುಡೆಟ್‌ಗಳಲ್ಲಿ ಇಲ್ಲವಲ್ಲಾ....!

ಬಾ.ರಂ. ಸುರೇಶ್, ಶಿವಮೊಗ್ಗ
ನಕ್ಕರೆ ಅದೇ ಸ್ವರ್ಗ. ಅತ್ತರೆ?
ಸೀರಿಯಲ್ ವೀಕ್ಷಕ ವರ್ಗ.

ಕೆ.ಎಸ್. ಸೋಮೇಶ್ವರ, ಬೆಂಗಳೂರು
ಸಂಸಾರದ ಮನೆವಾರ್ತೆ ನಿಭಾಯಿಸುವ ಮಡದಿಯನ್ನು ಗೃಹಿಣಿ ಎನ್ನುತ್ತಾರೆ. ಪತಿಯನ್ನು?
ಗೃಹಭೃತ್ಯ.

ವಿ. ಹೇಮಂತಕುಮಾರ್, ಬೆಂಗಳೂರು
ಪ್ರೇಮಿಗಳನ್ನು ಪ್ರಣಯ ಪಕ್ಷಿಗಳು ಅನ್ನುತ್ತಾರೆ. ಏಕೆ ಸರ್?



ಹೆದರಿಸಿದ ತಕ್ಷಣ ಹಾರಿಹೋಗಲು ಸಿದ್ಧವಿರುವುದರಿಂದ.

ದಿನೇಶ, ಗುಡ್ಡದೂರು
ಚಿತ್ರರಂಗದ ಸೆಲೆಬ್ರಿಟಿಗಳು, ರಾಜಕೀಯದ ವ್ಯಕ್ತಿಗಳು ಬೌನ್ಸರ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಅದು ಏಕೆ?
ಝೆಡ್ ಪ್ಲಸ್ ಸೆಕ್ಯುರಿಟಿಯವರು ಮಾಡಲಾಗದ್ದನ್ನು ಈ 'ಏಯ್!' ಸೆಕ್ಯುರಿಟಿಯವರು ಮಾಡುವರೆಂದು.

ರತ್ನಾ ಕೊರವರ, ಹೈದರಾಬಾದ್
ಉಳ್ಳವರು, ಇಲ್ಲದವರು ಎನ್ನುವ ಬದಲು ಎಲ್ಲರೂ ಉಳ್ಳವರಾಗುವ ಕಾಲ ಬಂದರೆ ಚೆನ್ನವಲ್ಲವೆ?
ಎರಡು ಪದ ಬಿಟ್ಟರಲ್ಲ ತೃಪ್ತಿ ಉಳ್ಳವರು, ಚಿಂತೆ ಇಲ್ಲದವರು ಎನ್ನಿ. ಅದೇ ನಿಜಸೊಬಗು.

■ ರಾಮ್